ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕುಂದು ಕೊರತೆ

## ಕಸ ವಿಲೇವಾರಿ ಮಾಡಿ

ವಿಜಯಪುರದ ವಾಟರ್ ಟ್ಯಾಂಕ್ ಪಕ್ಕದ ಶಂಕರಲಿಂಗ ಗುಡಿ ಮುಂಭಾಗ ಬಿದ್ದಿರುವ ಕಸದ ರಾಶಿ ಜನರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು, ತಕ್ಷಣ ಸ್ವಚ್ಛಗೊಳಿಸುವ ಕೆಲಸವಾಗಬೇಕು.

ಕಸದ ರಾಶಿ ಬಿದ್ದಿರುವ ಪ್ರದೇಶದ ಸುತ್ತಲೂ ದುರ್ವಾಸನೆಯಿಂದ ನಿತ್ಯ ಇಲ್ಲಿ ಸಂಚರಿಸುವ ಜನರು ಮೂಗಿಗೆ ಬಟ್ಟೆ ಹಿಡಿದುಕೊಂಡೇ ಹೋಗುವುದು ಅನಿವಾರ್ಯವಾಗಿದೆ. ಕಸ ಬಿದ್ದಿರುವುದರಿಂದ ಬಿಡಾಡಿ ದನಗಳ ಕಾಟ ಕೂಡ ಹೆಚ್ಚಿದೆ. ಇದರಿಂದ ಸಂಚಾರಕ್ಕೆ ದೊಡ್ಡ ತಲೆ ನೋವಾಗಿದೆ. ಬೈಕ್ ಸವಾರರು ಭಯದಲ್ಲಿಯೇ ಬೈಕ್ ಓಡಿಸಬೇಕಿದೆ.

ಕಸದ ರಾಶಿ ಪಕ್ಕದಲ್ಲೇ ಬೇಕರಿ ಪದಾರ್ಥಗಳನ್ನು ತಯಾರಿಸುವುದರಿಂದ ಕಸದಲ್ಲಿ ಉತ್ಪತ್ತಿಯಾಗುವ ಸೊಳ್ಳೆಗಳು, ಕಸಕ್ಕೆ ಮುತ್ತಿಕ್ಕುವ ನೊಣಗಳು ಅದರ ಮೇಲೆ ಕುಳಿತುಕೊಳ್ಳುವುದರಿಂದ ಜನರ ಆರೋಗ್ಯ ಹದಗೆಡುತ್ತಿದೆ. ಸಂಜೆಯಾದರೆ ಸಾಕು ಮನೆಯಲ್ಲಿ ಕುಳಿತುಕೊಳ್ಳದಂತೆ ಸೊಳ್ಳೆಗಳ ಕಾಟವಿದೆ. ಮಹಾನಗರ ಪಾಲಿಕೆ ಸರಿಯಾದ ಸಮಯಕ್ಕೆ ಕಸ ವಿಲೇವಾರಿ ಮಾಡಲು ವಿಫಲವಾಗಿರುವುದೇ ಇದಕ್ಕೆ ಪ್ರಮುಖ ಕಾರಣ. ಜನರು ಕೂಡ ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ನಿಲ್ಲಿಸಬೇಕು.

ಸುಷ್ಮಾ ಪವಾರ, ಪತ್ರಿಕೋದ್ಯಮ ವಿದ್ಯಾರ್ಥಿನಿ

CS Scanned with CamScanner